# ೨೨

# “ಯೇಸು ಕಣ್ಣೀರು ಬಿಟ್ಟನು”

## (11:1-44)

1993ರ ಚಲನ ಚಿತ್ರ “Shadowlands” ಎಂಬುದು ದೊಡ್ಡ ಬರಹಗಾರನಾದ ಸಿ. ಎಸ್. ಲೂಯಿಸ್ ಮತ್ತು ಜೊಯ್ ಗ್ರೆಷಮ್ ಎಂಬವರನ್ನೊಳಗೊಂಡ ಕಹಿಸಿಹಿ ಪ್ರೇಮ ಕಥೆಯನ್ನು ಹೇಳುತ್ತದೆ. ಚಲನ ಚಿತ್ರದ ಪ್ರಾರಂಭದಲ್ಲಿ, ಲೂಯಿಸನು ಜನರಿಂದ ಪೂರ್ಣವಾಗಿ ತುಂಬಿದ್ದ ಮಂದಿರದಲ್ಲಿ ನೋವಿನ ವಿಷಯದ ಮೇಲೆ ಭಾಷಣ ಮಾಡುತ್ತಿದ್ದನು. ಅವನು ಅವರಿಗೆ ಹೀಗೆ ಹೇಳಿದನು,

> ಕಿವುಡು ಜಗತ್ತನ್ನು ಎಚ್ಚಿಸಲು ನೋವು ದೇವರ ದೊಡ್ಡ ಧ್ವನಿವರ್ಧಕವಾಗಿದೆ ... ನಾವು ಕಲ್ಲಿನ ಬಂಡೆಯಂತೆ ಇದ್ದು ಅದರಿಂದ ಶಿಲ್ಪಿಯು ಮನುಷ್ಯರ ರೂಪಗಳನ್ನು ಕೊರೆಯುತ್ತಾನೆ. ಆತನ ಉಳಿಯ ಹೊಡೆತಗಳು ನಮಗೆ ನೋವನ್ನು ಉಂಟು ಮಾಡುವಂಥವುಗಳು ನಮ್ಮನ್ನು ಪರಿಪೂರ್ಣರನ್ನಾಗಿ ಮಾಡುತ್ತವೆ.

ಚಲನ ಚಿತ್ರವು ಮುಂದುವರಿದಂತೆ, ಲೂಯಿಸನು ಜೊಯ್ ಗ್ರೇಷಮ್‌ಳನ್ನು ಬೇಟಿ ಯಾಗುತ್ತಾನೆ. ಮತ್ತು ಆಕೆ ಅವನೊಂದಿಗೆ ಪ್ರೇಮಿಸಲು ಪ್ರಾರಂಭಿಸುತ್ತಾಳೆ. ಲೂಯಿಸನು, ಒಬ್ಬ ದೃಢವಾದ ಬ್ರಹ್ಮಚಾರಿಯು, ಮೊದಲು ಜೊಯ್‌ಯೊಂದಿಗೆ ಕೇವಲ ಸ್ನೇಹದಲ್ಲಿ ಆಸಕ್ತಿಯುಳ್ಳವನಾಗಿದ್ದನು. ಒಂದು ದಿನ, ಅವರಿಬ್ಬರು ಅವನ ಕೋಣೆಯಲ್ಲಿ ಮಧ್ಯಾಹ್ನದ ಚಹಕ್ಕಾಗಿ ಕುಳಿತುಕೊಂಡಿದ್ದಾಗ, ಜೊಯ್ ನಿರಾಶೆಯಿಂದ ಲೂವಿಸನ ಕಡೆಗೆ ಗುಡುಗಿದಳು. ಆಕೆ ಹೀಗೆ ಗಟ್ಟಿಯಿಂದ ಹೇಳಿದಳು,

> ನಾನು ಈಗಲೇ ಅದನ್ನು ನೋಡಿದ್ದೇನೆ ನಿನ್ನನ್ನು ಯಾರು ಸ್ಪರ್ಶಿಸದ ಹಾಗೆ ನಿನಗಾಗಿ ಒಂದು ಜೀವಿತವನ್ನು ಏರ್ಪಡಿಸಿಕೊಂಡಿರುವಿ. ನಿನಗೆ ನಿಕಟವಾಗಿರುವ ಪ್ರತಿಯೊಬ್ಬನೂ ನಿನಗಿಂತ ಚಿಕ್ಕವನಾಗಿದ್ದಾನೆ ಇಲ್ಲವೇ ನಿನಗಿಂತ ಬಲಹೀನನಾಗಿದ್ದಾನೆ ಇಲ್ಲವೇ ನಿನ್ನ ನಿಯಂತ್ರಣದಲ್ಲಿರುತ್ತಾನೆ.

ನಿಧಾನವಾಗಿ, ಲೂಯಿಸನು ತಾನು ತನ್ನ ಜೀವಿತವನ್ನು ಭಾವನೆಗಳಿಂದ ಮತ್ತು ನೋವಿನಿಂದ ಅಪಹಾಸ್ಯ ಮಾಡಿದ್ದರ ರೀತಿಯ ಬಗ್ಗೆ ಜಾಯ್‌ಳು ಸರಿಯಾಗಿದ್ದಾಳೆಂದು ಅರ್ಥಮಾಡಿಕೊಂಡನು. ಅನಂತರ, ಜಾಯ್‌ಳು ಕ್ಯಾನ್ಸರಿನಿಂದ ಆಸ್ಪತ್ರೆಯಲ್ಲಿದ್ದಾಗ, ಲೂಯಿಸನು ಆಕೆಯೊಂದಿಗೆ ಮದುವೆ ಯಾಗುವ ಪ್ರಸ್ತಾಪವನ್ನಿಟ್ಟನು; ಮತ್ತು 1956ರಲ್ಲಿ ಅವರು ಗಂಡ ಹೆಂಡತಿಯರಾದರು. ಕ್ಯಾನ್ಸರಿನ ಮೋಡವು ಅವರ ಮೇಲೆ ತುಂಬಿದ್ದರು ಮುಂದಿನ ನಾಲ್ಕು ವರ್ಷಗಳು ಅವರಿಗೆ ಅದ್ಭುತಕರ ವಾದ ವರ್ಷಗಳಾಗಿದ್ದವು. ಈ ಸಮಯದಲ್ಲಿ ಅವರು ತಮ್ಮ ಗೋಡೆಯ ಮೇಲಿನ ಪೇಂಟಿಂಗಿ ನಲ್ಲಿ ಚಿತ್ರಿಸಲ್ಪಟ್ಟಿದ್ದ ಸುಂದರವಾದ ಕಣಿವೆಯನ್ನು ನೋಡಲು ತಡವಾಗಿ ಹನಿಮೂನ್ ಟ್ರಿಪ್ಪಿಗೆ ಹೋದರು. ಹೊಲದಲ್ಲಿ ನಡೆಯುತ್ತಿದ್ದಾಗ ಮಳೆಬೀಳಲು ಪ್ರಾರಂಭವಾಯಿತು. ಆದುದರಿಂದ ಅವರು ಹುಲ್ಲು ಸಂಗ್ರಹಿಸಿಡಲ್ಪಟ್ಟಿದ್ದ ಶೆಡ್ಡಿನಲ್ಲಿ ಆಶ್ರಯವನ್ನು ಹುಡುಕಿದರು. ಅವರು ಅಲ್ಲಿ ಕುಳಿತುಕೊಂಡಿದ್ದಾಗ, ಜೊಯ್‌ಳು ಬರಲಿಕ್ಕಿದ್ದ ತನ್ನ ಮರಣದ ಬಗ್ಗೆ ಚರ್ಚಿಸಲು ಒತ್ತಾಯ

ಮಾಡಿದಳು. ಸ್ಥಿರವಾದ ಧ್ವನಿಯಲ್ಲಿ ಆಕೆ ಹೇಳಿದಳು,

> ಈ ಮಳೆ ನಿಲ್ಲುವ ಮತ್ತು ನಾವು ಹಿಂದಿರುಗಿಹೋಗುವ ಮೊದಲು ನಾನು ಹೇಳುತ್ತೇನೆ ... ನಾನು ಸಾಯಲಿಕ್ಕಿದ್ದೇನೆ ಮತ್ತು ಆಗಲೂ ಸಹ ನಾನು ನಿನ್ನೊಂದಿಗಿರುವೆನು. ನಾನು ಅದನ್ನು ಕೇವಲ ಮಾರ್ಗವು, ನಾನು ಈಗ ನಿಮ್ಮೊಂದಿಗೆ ಮಾತಾಡುವದಕ್ಕೆ ನಾನು ಶಕ್ತಳಾಗಿದ್ದರೆ ಮಾತ್ರ. ... ಕೇವಲ ಮುನ್ನಡಿಸಿಕೊಂಡು ಹೋಗುವದಕ್ಕಿಂತ ಅದು ಹೆಚ್ಚು ಉತ್ತಮವಾಗಿದೆಯೆಂದು ನಾನು ಯೋಚಿಸುತ್ತೇನೆ. ನಾನು ಹೇಳಲು ಪ್ರಯತ್ನಿಸುವುದು, ಆಗ ನೋವು, ಈಗ ಸುಖದ ಭಾಗವಾಗಿದೆ. ಅದು ಪ್ರಯಾಣವಾಗಿದೆ.

ಅನಂತರ, ಜೊಯ್ ಮರಣ ಹೊಂದಿದಾಗ, ಲೂಯಿಸನು ಹಾನಿಯಿಂದ ಧ್ವಂಶಗೊಳಿಸಲ್ಪಟ್ಟನು, ಹಾಗೆಯೇ ಜೊಯ್‌ಳ ಎಂಟು ವರ್ಷ ವಯಸ್ಸಿನ ಮಗ, ಡಗ್ಲಾಸನೂ ಹಾನಿಗೊಳಗಾದನು. ಇಬ್ಬರೂ ಮೌನವಾಗಿ ಶ್ರಮೆತಾಳಿದರು. ಒಂದು ದಿನ ಲೂಯಿಸನು ಮೇಲಿನ ಕೋಣೆಗೆ ಹೋದನು. ಅಲ್ಲಿಗೆ ಬಾಲಕನು ಒಬ್ಬನೇ ಹೋಗಿ ಏಕಾಂಗಿಯಾಗಿರಲು ಬಯಸುತ್ತಿದ್ದನು. ಏನು ಹೇಳಬೇಕೆಂಬುದನ್ನು ತಿಳಿಯದೇ ಲೂಯಿಸನು ಅವನ ಪಕ್ಕದಲ್ಲಿ ಕುಳಿತುಕೊಂಡನು. ಅವರ ಚರ್ಚೆಯು ಚಲನ ಚಿತ್ರದಲ್ಲಿ ಬಹಳ ಬಲವಾದ ಕ್ಷಣವಾಗಿತ್ತು. ಲೂಯಿಸನು ಡಗ್ಲಾಸನಿಗೆ ಅವನು ತನ್ನ ತಾಯಿಯನ್ನು ಚಿಕ್ಕಪ್ರಾಯದಲ್ಲಿಯೇ ಕಳೆದು ಕೊಂಡನು ಎಂದು ಹೇಳಿದನು, ಮತ್ತು ಅವರಿಬ್ಬರು ಮರಣದ ಬಗ್ಗೆ ಚರ್ಚಿಸಲು ಪ್ರಾರಂಭಿಸಿದರು:

> ಡಗ್ಲಾಸ್: ನೀನು ಪರಲೋಕದ ಬಗ್ಗೆ ನಂಬುವಿಯೋ?
> ಲೂಯಿಸ್: ಹೌದು, ನಾನು ನಂಬುತ್ತೇನೆ.
> ಡಗ್ಲಾಸ್: ನಾನು ಪರಲೋಕದ ಬಗ್ಗೆ ನಂಬುವದಿಲ್ಲ.
> ಲೂಯಿಸ್: ಹಾಗೆಯೇ ಆಗಲಿ.
> ಡಗ್ಲಾಸ್: ನಾನು ಆಕೆಯನ್ನು ಪುನಃ ನೋಡಲು ನಿಶ್ಚಯವುಳ್ಳವನಾಗಿದ್ದೇನೆ.
> ಲೂಯಿಸ್: ನಾನೂ ಸಹ!

ಆಗ, ಇಬ್ಬರೂ ಅಳಲಿಕ್ಕೆ ಪ್ರಾರಂಭಿಸಿದರು. ಲೂಯಿಸನು ಬಾಲಕನನ್ನು ಅಪ್ಪಿಕೊಂಡನು, ಮತ್ತು ಅವರು ಒಂದಾಗಿ ಅಳುವದನ್ನು ಮುಂದುವರಿಸಿದರು. ಚಲನ ಚಿತ್ರದ ಅಂತ್ಯದಲ್ಲಿ, ಲೂಯಿಸನು ಗ್ರಾಮಾಂತರ ಪ್ರದೇಶದ ಮುಖಾಂತರ ನಡೆಯುತ್ತಿದ್ದನು ಮತ್ತು ಡಗ್ಲಾಸನು ಸಮೀಪದ ಹೊಲದಲ್ಲಿ ತನ್ನ ನಾಯಿಯೊಂದಿಗೆ ಓಡಾಡುತ್ತಿದ್ದನು. ಅವರಲ್ಲಿ ಬೆಳೆಯುತ್ತಿರುವ ಸ್ನೇಹ ಮತ್ತು ಪ್ರೀತಿಯು ಸ್ಪಷ್ಟವಾಗಿತ್ತು. ಅವರ ಸಂಬಂಧವು ಎಂದೆದಿಗೂ ಬದಲಾಯಿತು, ಅದಕ್ಕೆ ಇಬ್ಬರೂ ಒಂದಾಗಿ ನೋವನ್ನು ಅನುಭವಿಸಿದ್ದಾಗಿತ್ತು.

ಈ ಅಧ್ಯಯನದ, 11:1-44ರ ಬಹಳ ವಿಶೇಷ ಪಠ್ಯದಲ್ಲಿ, ಯೇಸುವು ತನ್ನ ಪ್ರೀತಿಯ ಸ್ನೇಹಿತನ ಲಾಜರನ ಸಮಾಧಿಯ ಬಳಿಯಲ್ಲಿ ಯೇಸುವಿನ ಕಥೆಯು ಹೇಳಲ್ಪಟ್ಟಿದೆ. ಅದು "ವಾಕ್ಯವೆಂಬವನು ನರಾವತಾರ ಎತ್ತಿ, ನಮ್ಮ ಮಧ್ಯದಲ್ಲಿ ವಾಸಮಾಡಿದ್ದರ" ರೀತಿಯನ್ನು ಪ್ರದರ್ಶಿಸುವ ಒಂದು ಕಥೆಯಾಗಿದೆ (1:14). ಯೇಸುವು ನೋವಿನ ನಮ್ಮ ಜಗತ್ತನ್ನು ಸಂತೋಷದಿಂದ ಪ್ರವೇಶಿಸಿದ್ದನ್ನು, ನಮ್ಮ ಅಂಧಕಾರದ ತಾಸಿನಲ್ಲಿ ನಮ್ಮ ಬಳಿಗೆ ಬರುವದನ್ನು ಮತ್ತು ನಮ್ಮ ದುಃಖದಲ್ಲಿ ನಮ್ಮೊಂದಿಗೆ ಕುಳಿತುಕೊಳ್ಳುವದನ್ನು ನೋಡುತ್ತೇವೆ. ಆತನು ಶ್ರಮೆಯ ಕಾರಣವನ್ನು ಇಲ್ಲವೇ ನೋವಿನ ಅರ್ಥವನ್ನು ಕುರಿತು ನಮಗೆ ಭಾಷಣಮಾಡುವದಿಲ್ಲ; ಆತನು ತನ್ನ ಕಣ್ಣೀರನ್ನು ನಮ್ಮ ಕಣ್ಣೀರಿನೊಂದಿಗೆ ಕೂಡಿಸುತ್ತಾನೆ. ಇದರಲ್ಲಿ ನಾವು ಅನಿರೀಕ್ಷಿತ ಆದರಣೆಯನ್ನು ಹಾಗೂ ದೇವರೊಂದಿಗೆ ಆಳವಾದ ಅನ್ಯೋನ್ಯತೆಯನ್ನು ಕಂಡು ಕೊಳ್ಳುತ್ತೇವೆ.

ಯೋಹಾನ 11ನ್ನು ವಿವಿಧವಾದ ರೀತಿಗಳಲ್ಲಿ ಅಧ್ಯಯನ ಮಾಡಬಹುದು ಮತ್ತು

ಈ ಸರಣಿಯಲ್ಲಿಯ ಇನ್ನೂ ಎರಡು ಪಾಠಗಳು ಈ ಆಶ್ಚರ್ಯಕರವಾದ ಪಠ್ಯಕ್ಕೆ ಮೀಸಲಾಗಿಡಲ್ಪಡುವವು. ಅಧ್ಯಾಯದ ಮುಖಾಂತರ ಈ ಪ್ರಥಮ ಪಯಣದಲ್ಲಿ, ಅನಿಸುವಿಕೆಗಳಿಗೆ ಹಾಗೂ ಭಾವನೆಗಳಿಗೆ ಉಲ್ಲೇಖಗಳ ಮೇಲೆ ಕೇಂದ್ರೀಕರಿಸಲು ನಾವು ಬಯಸುತ್ತೇವೆ.

## ಪ್ರೀತಿ

ಬೇಥಾನ್ಯ ಗ್ರಾಮದ ಲಾಜರನು ಅಸ್ವಸ್ಥನಾದನು ಹಾಗೂ ಈ ಸಮಾಚಾರವು ಯೇಸುವಿಗೆ ಅಸ್ವಸ್ಥನಾದವನ ಸಹೋದರಿಯರಾದ ಮರಿಯಳು ಹಾಗೂ ಮಾರ್ಥಳಿಂದ ಕಳುಹಿಸಲ್ಪಟ್ಟಿತು. (ವಚನ 1). "ಸ್ವಾಮೀ, ನಿನ್ನ ಪ್ರಿಯ ಮಿತ್ರನು ಅಸ್ವಸ್ಥನಾಗಿದ್ದಾನೆ" ಎಂದು ಅವರು ಹೇಳಿದರು (ವಚನ 3). ಮೊದಲ ನೋಟಕ್ಕೆ ಇದು ವಿಚಿತ್ರವಾದ ಭಾಷೆಯಾಗಿ ಕಂಡು ಬರಬಹುದು. ಯೇಸುವು ಪ್ರತಿಯೊಬ್ಬರನ್ನು ಪ್ರೀತಿಸಲಿಲ್ಲವೇ? ಯಾವ ಒಬ್ಬನೇ ವ್ಯಕ್ತಿಯನ್ನು "ನಿನ್ನ ಪ್ರಿಯ ಮಿತ್ರನು" ಎಂದು ಹೇಗೆ ವಿವರಿಸಬಹುದು? ಯೇಸುವು ಜಗತ್ತಿನಲ್ಲಿ ಪ್ರತಿಯೊಬ್ಬನನ್ನು ಪ್ರೀತಿಸಿದನು ಹಾಗೂ ಪ್ರೀತಿಸುತ್ತಾನೆ, ಆದರೆ ಅದು ಆತನಿಗೆ ವಿಶೇಷವಾದ ಸ್ನೇಹಿತರು ಇರಲಿಲ್ಲ ಎಂದು ಅರ್ಥವಾಗುವದಿಲ್ಲ. ಲಾಜರರ, ಮರಿಯಳು ಮತ್ತು ಮಾರ್ಥಳು ಯೇಸುವಿಗೆ ಯಾರಾಗಿದ್ದರು ಎಂಬುದನ್ನು ಮೆಚ್ಚಿಕೊಳ್ಳಲಿಕ್ಕೆ, ನಿಮ್ಮಷ್ಟಕ್ಕೆ ನೀವೇ ಒಂದು ಸರಳ ಪ್ರಶ್ನೆಯನ್ನು ಕೇಳಿಕೊಳ್ಳಿರಿ. ರಾತ್ರಿ 2 ಗಂಟೆಗೆ ನಿಮಗೆ ಒಂದು ತುರ್ತು ಪರಿಸ್ಥಿತಿಯಿದ್ದರೆ, ನೀವು ಯಾರನ್ನು ಕರೆಯುವಿರಿ? ಯೇಸುವು ಈ ಮೂವರು ನಿಕಟವಾದ ಸ್ನೇಹಿತರನ್ನು ಕರೆದಿರಬಹುದು.

ಯೇಸು ಅವರ ಸುದ್ಧಿಯನ್ನು ಕೇಳಿದಾಗ, ಆತನು ತನ್ನ ಶಿಷ್ಯರ ಕಡೆಗೆ ತಿರುಗಿ ಕೊಂಡನು ಮತ್ತು ರೋಗವು "ಮರಣಕ್ಕಾಗಿ ಬಂದದ್ದಲ್ಲ" (ವಚನ 4) ಎಂದು ಅವರಿಗೆ ಭರವಸೆಕೊಟ್ಟನು, ಆದರೆ ಅದು "ದೇವರ ಮಹಿಮೆಗೋಸ್ಕರ ಬಂದದ್ದು" ಆಗಿತ್ತು (ವಚನ 4ಬಿ). ಯೋಹಾನನ ಮುಂದಿನ ಟಿಪ್ಪಣಿಯು ಈ ಮೂವರ ಕಡೆಗೆ ಇದ್ದ ಯೇಸುವಿನ ವಿಶೇಷ ಭಾವನೆಗಳನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ. "ಯೇಸುವಿಗೆ ಮಾರ್ಥಳಲ್ಲಿಯೂ ಆಕೆಯ ತಂಗಿಯಲ್ಲಿಯೂ, ಮತ್ತು ಲಾಜರನಲ್ಲಿಯೂ ಪ್ರೀತಿ ಇತ್ತು" (ವಚನ 5).

ಎರಡು ದಿನಗಳ ನಂತರ, ಯೇಸು ತನ್ನ ಶಿಷ್ಯರಿಗೆ ತಾನು ಲಾಜರನ್ನು ನೋಡಲು ಯೂದಾಯಕ್ಕೆ ಪ್ರಯಾಣ ಮಾಡಬೇಕೆಂದು ಹೇಳಿದನು. ಯೆಹೂದಿ ನಾಯಕರು ಯೇಸುವನ್ನು ಎಷ್ಟು ಬಹಳವಾಗಿ ದ್ವೇಷಿಸುತ್ತಿರುವರೆಂಬುದನ್ನು ಮತ್ತು ಆತನನ್ನು ಕೊಲ್ಲಲು ಬಯಸುತ್ತಿರುವರೆಂಬುದನ್ನು ತಿಳಿದವರಾಗಿದ್ದು, ಶಿಷ್ಯರು ಅಲ್ಲಿಗೆ ಹೋಗದಂತೆ ಯೇಸುವಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು. ಹೀಗಿದ್ದರೂ, ಯೇಸುವು ಹೋಗುವದನ್ನು ಒತ್ತಿ ಹೇಳಿದನು. "ನಮ್ಮ ಮಿತ್ರನಾದ ಲಾಜರನು ನಿದ್ರೆಮಾಡುತ್ತಾನೆ" ಎಂದು ಹೇಳಿದನು (ವಚನ 11ಬಿ). ಯೇಸುವಿನ ಭಾಷೆಯು ಆತನು ಲಾಜರನೊಂದಿಗೂ ಅವನ ಸಹೋದರಿಯರೊಂದಿಗೂ ಇದ್ದ ಆತನ ವಿಶೇಷ ಸಂಬಂಧವನ್ನು ಸೂಚಿಸುತ್ತದೆ. ಆತನು ಹೇಳಿದ ನಿದ್ರೆಯು ನಿಜವಾಗಿಯೂ ಮರಣವಾಗಿತ್ತು, ಮತ್ತು ಅನಂತರ ಆತನು ಅವರಿಗೆ ಸ್ಪಷ್ಟವಾಗಿ, "ಲಾಜರನು ಸತ್ತು ಹೋದನು" (ವಚನ 14) ಎಂದು ಹೇಳಿದನು. ಯೆರೂಸಲೇಮಿಗೆ ಹೋಗುವುದು ಎಲ್ಲರಿಗೂ ಮರಣ ವೆಂಬುದನ್ನು ಅರಿತು ಕೊಂಡವನಾಗಿ ಥೋಮನು, "ನಾವು ಸಹ ಹೋಗಿ ಆತನೊಡನೆ ಸಾಯೋಣ" (ವಚನ 16) ಎಂದು ಹೇಳಿದನು. ಅವನ ಮಾತುಗಳಲ್ಲಿ ನಾವು ಭಯವು ಮತ್ತು ನಿಷ್ಟೆಯು ಒಂದಾಗಿ ಕೂಡಿದ್ದನ್ನು ನೋಡುತ್ತೇವೆ.

## ನಿರಾಶೆ

ಯೇಸುವು ಬೇಥಾನ್ಯವನ್ನು ತಲುಪಿದಾಗ, ಲಾಜರನ ದೇಹವು ಸಮಾಧಿಯಲ್ಲಿ ಇಡಲ್ಪಟ್ಟು ನಾಲ್ಕು ದಿನಗಳಾಗಿತ್ತು. ಯೇಸುವು ಪಟ್ಟಣವನ್ನು ಪ್ರವೇಶಿಸುವದಕ್ಕಿಂತ ಮೊದಲು ಮಾರ್ಥಳು ಆತನು ಬರುವದನ್ನು ಕೇಳಿ ಆತನನ್ನು ಸಂದರ್ಶಿಸಲು ಹೊರಗೆ ಹೋದಳು. ಆತನನ್ನು

ಆಕೆ ನೋಡಿದಾಗ, "ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ" (ವಚನ 21) ಎಂದು ಹೇಳಿದಳು. ಇಂದೂ ಸಹವಾಚಕನು ಆಕೆಯ ಮಾತುಗಳಲ್ಲಿದ್ದ ನಿರಾಶೆಯ ವೇದನೆಯನ್ನು "ಕೇಳ ಬಹುದು," "ಇರುತ್ತಿದ್ದರೆ" ಎಂಬುದು ಯಾವುದೇ ಭಾಷೆಯಲ್ಲಿ ಅತೀ ದುಃಖಕರವಾದ ಭಾವನೆಯಾಗಿರುತ್ತದೆ. ಲಾಜರನ ಅಸ್ವಸ್ಥತೆಯ ಬಗ್ಗೆ ಸುದ್ದಿಯನ್ನು ಸಂದೇಶವಾಹಕರು ಯೇಸುವನ್ನು ತಲುಪುವ ಸಮಯದಲ್ಲಿ ಆಗಲೇ ಲಾಜರನು ಸತ್ತು ಹೋಗಿರ ಬಹುದಾಗಿದ್ದರೂ, ಯೇಸುವು ತಮ್ಮ ಬಳಿಗೆ ಬರುವದಕ್ಕೆ ತಡಮಾಡಿದ್ದಕ್ಕಾಗಿ ಮಾರ್ಥಳಿಗೆ ನೋವಾಗಿರಬಹುದು. ಯೇಸುವು ಅಲ್ಲಿ ನಿಂತುಕೊಂಡನು ಮತ್ತು "ಅದನ್ನು ತೆಗೆದುಕೊಂಡನು" ಆಕೆ ತನ್ನ ನೋವನ್ನು ತನ್ನ ಗಲಿಬಿಲಿಯನ್ನು, ಮತ್ತು ತನ್ನ ನಿರಾಶೆಯನ್ನು ವ್ಯಕ್ತಪಡಿಸಲು ಬಿಟ್ಟನು.

## ಕಣ್ಣೀರು

ಯೇಸುವಿನೊಂದಿಗೆ ಅಲ್ಪ ಮಾತುಗಳ ನಂತರ, ಮಾರ್ಥಳು ಮನೆಗೆ ಹೋಗಿ, ತನ್ನ ಸಹೋದರಿಗೆ ಗುಪ್ತವಾಗಿ, "ಗುರುವು ಬಂದಿದ್ದಾನೆ, ನಿನ್ನನ್ನು ಕರೆಯುತ್ತಾನೆ" (ವಚನ 28) ಎಂದು ಹೇಳಿದಳು. ತಾನು ಏನು ಮಾಡುತ್ತಿರುವವೆಂಬುದನ್ನು ವಿವರಿಸದೇ, ಮರಿಯಳು ತಕ್ಷಣವೇ ಎದ್ದು ಯೇಸುವನ್ನು ನೋಡಲು ಹೋದಳು. ಅಳುವದಕ್ಕಾಗಿ ಆಕೆ ಲಾಜರನ ಸಮಾಧಿಯ ಬಳಿಗೆ ಹೋಗುತ್ತಿರುವಳೆಂದು ತಿಳಿದು, ಸಹೋದರಿಯರೊಂದಿಗೆ ದುಃಖಪಡಲು ಯೆರೂಸಲೇಮಿನಿಂದ ಬೇಥಾನ್ಯಕ್ಕೆ ಬಂದಿದ್ದ ಯೆಹೂದ್ಯರು ಮನೆಯಿಂದ ಹೊರಗೆ ಆಕೆಯನ್ನು ಹಿಂಬಾಲಿಸಿದರು.

ಮರಿಯಳು ಯೇಸುವನ್ನು ಸಂಧಿಸಿದಂತೆ; ಆಕೆ "ಆತನ ಪಾದಕ್ಕೆ ಬಿದ್ದಳು" (ವಚನ 32) ಎದ್ದು ನಿಂತು ಕೊಂಡು, ಆತನೊಂದಿಗೆ ಮಾತಾಡಿದ ಸಹೋದರಿಯ ನಿಯಂತ್ರಣಕ್ಕೆ ಇದು ವಿರುದ್ಧವಾದದ್ದಾಗಿತ್ತು. ಮರಿಯಳು ಯೇಸುವಿನ ಪಾದಗಳ ಬಳಿಯಲ್ಲಿ ಬಿದ್ದುದ್ದು ಆಕೆ ಗರ್ವ ಇಲ್ಲವೇ ತೋರುವಿಕೆಯ ಬಗ್ಗೆ ಚಿಂತಿಸುವವಳಾಗಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಆಕೆಯ ಹೃದಯದಲ್ಲಿದ್ದ ನೋವು ಇತರ ಭಾವನೆಗಳಿಗಿಂತ ಹೆಚ್ಚಾಗಿತ್ತು. ಆಗ ಮರಿಯಳು ತನ್ನ ಸಹೋದರಿಯ ಮಾತುಗಳನ್ನು ಪುನರಾವರ್ತಿಸಿದಳು: "ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ" (ವಚನ 32).

ಅನಂತರ ಸಂಭವಿಸಿದ್ದನ್ನು ಕಥೆಯ "ಹೃದಯ" ಎಂದು ಹೇಳಬಹುದು. ಯೋಹಾನನು ಹೀಗೆ ಬರೆದಿದ್ದಾನೆ,

> ಆಕೆ ಗೋಳಾಡುವದನ್ನೂ ಆಕೆಯ ಸಂಗಡ ಬಂದ ಯೆಹೂದ್ಯರ ಗೋಳಾಡುವದನ್ನು ಯೇಸು ಕಂಡಾಗ ಆತ್ಮದಲ್ಲಿ ನೊಂದು ಕೊಂಡು ತತ್ತರಿಸಿ - ಅವನನ್ನು ಎಲ್ಲಿ ಇಟ್ಟಿದ್ದೀರಿ ಎಂದು ಕೇಳಿದನು. ಅವರು - ಸ್ವಾಮೀ ಬಂದು ನೋಡು ಅಂದರು. ಯೇಸು ಕಣ್ಣೀರು ಬಿಟ್ಟನು (ವಚನಗಳು 33-35).

ಯೇಸುವಿನ ಮೇಲೆ ಸಹೋದರಿಯರ ನೋವಿನ ಪರಿಣಾಮವನ್ನು ಕೇವಲ ಕೆಲವೇ ಮಾತುಗಳಲ್ಲಿ - ಆದರೆ ಮರೆಯಲಾಗದ ರೀತಿಯಲ್ಲಿ ಯೋಹಾನನು ವಿವರಿಸಿದ್ದಾನೆ. ಆತನು "ಆಳವಾಗಿ ನೊಂದುಕೊಂಡನು" ಇಂದು, ನಾವು ಅವರ ನೋವು "ಅವನಿಗೆ ತಲುಪಿತು" ಎಂದು ಹೇಳಬಹುದು. ಅವರು ಭಾವಿಸುತ್ತಿರುವಂಥದ್ದು ತನ್ನ ಹೃದಯದೊಳಗೆ ಪ್ರವೇಶಿಸುವಂತೆ ಆತನು ಬಿಟ್ಟನು. ಯೇಸುವಿನ ಕಣ್ಣೀರಿಡುವಿಕೆಯು ಸಹೋದರಿಯರ ಇಲ್ಲವೇ ಅವರೊಂದಿಗೆ ಬಂದ ದುಃಖಿಸುವವರ ನೋಟಕ್ಕೆ ಸಮನಾದದ್ದಾಗಿರಲಿಲ್ಲ. ಅದು ಬಹುಶಃ ದುಃಖಿಸುವಂತೆ ಇಲ್ಲವೇ ಒಬ್ಬ ವ್ಯಕ್ತಿಯು ಹೇಳಿದಂತೆ; "ಕಣ್ಣೀರುಗಳ ಮೃದುವಾದ ಮಳೆಯಂತೆ ಆಗಿತ್ತು."

"ಕಣ್ಣೀರುಗಳು ಪ್ರಾಣದ ಗಾಯಗಳಲ್ಲಿಯ ರಕ್ತದಂತೆರುವವು" ಎಂದು ನಿಸ್ಸಾದ ಗ್ರೆಗರಿಯು ಬರೆದನು.[1] ದುಃಖಿಸುತ್ತಿದ್ದ ಕುಟುಂಬದೊಂದಿಗೆ ಯೇಸುವಿನ ಹೃದಯವು ಗಾಯಗೊಂಡಿತು, ಹಾಗೂ ಆತನು ಅವರೊಂದಿಗೆ ಅತ್ತನು.

ನೋಡಿದವರು, "ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು!" (ವಚನ 36) ಎಂದು ಹೇಳಿದರು. ಕೆಲವರು ಯೋಹಾನನು ಜನರ ಗುಂಪು ಯೇಸುವನ್ನು ಈ ಹಂತದಲ್ಲಿ ಎಷ್ಟು ತಪ್ಪಾಗಿ ಅರ್ಥಮಾಡಿಕೊಂಡರು ಎಂಬುದನ್ನು ತೋರಿಸುತ್ತಾನೆ ಎಂದು ಯೋಚಿಸಿದರು. ನಾನು ಅದನ್ನು ಒಪ್ಪಿಕೊಳ್ಳುವದಿಲ್ಲ ಏನು ನಡೆಯುತ್ತಿತ್ತೋ ಅದನ್ನೇ ಯೋಹಾನನು ವಿವರಿಸಲು ಪದಗಳನ್ನು ಉಪಯೋಗಿಸಿದನು ಎಂದು ನಾನು ನಂಬುತ್ತೇನೆ. ಇವರು ಪ್ರೀತಿಯ ಸ್ನೇಹಿತರಾಗಿದ್ದರು, ಮತ್ತು ಅವರ ಹಾನಿಯು ಆತನ ಹಾನಿಯಾಗಿರುತ್ತದೆ.

ಲಾಜರನ ದೇಹವು ಎಲ್ಲಿ ಇಡಲ್ಪಟ್ಟಿದೆಯೆಂದು ಯೇಸುವು ಕೇಳಿದನು. ಮತ್ತು ಆತನು ಸಮಾಧಿಯ ಬಳಿಗೆ ಹೋದನು. ಯೇಸುವು "ತಿರಿಗಿ ತನ್ನಲ್ಲಿ ನೊಂದುಕೊಂಡನು" (ವಚನ 38) ಎಂದು ಯೋಹಾನನು ಬರೆದನು.[2] "ಯೇಸುವಿನ ಕಣ್ಣೀರಿನ ಅರ್ಥವೇನು?" ಎಂದು ನಾವು ಪ್ರಶ್ನೆ ಮಾಡತಕ್ಕದ್ದು. ಲಾಜರನು ಸತ್ತು ಹೋದದ್ದರಿಂದ ಆತನು ಅತ್ತನೋ? ನಿಶ್ಚಯವಾಗಿಯೂ ಇನ್ನೂ ಕೆಲವೇ ಕ್ಷಣಗಳಲ್ಲಿ ತಾನು ಲಾಜರನನ್ನು ಜೀವಕ್ಕೆ ಹಿಂದಿರುಗಿ ಎಬ್ಬಿಸುವೆನೆಂದು ಆತನು ತಿಳಿದಿದ್ದನು. ಇತರರಲ್ಲಿ ಆತನು ನೋಡಿದ ನೋವಿನ ಕಾರಣದಿಂದ ಕಣ್ಣೀರು ಬಂದಿರ ಬಹುದೋ? ಬಹುಶಃ ಹಾಗಿರಬೇಕು. ಪುನಃ, ಅವರ ದುಃಖವು ಬೇಗನೆ ಅವರು ಎಂದೂ ಅನುಭವಿಸಿದ್ದಕ್ಕಿಂತ ಹೆಚ್ಚು ಅತೀ ದೊಡ್ಡ ಆನಂದವಾಗಿ ಮಾರ್ಪಡುವದೆಂದು ಆತನು ತಿಳಿದಿದ್ದನು. ತನ್ನ ಸ್ನೇಹಿತರಲ್ಲಿ ಆತನು ಅವರ ನಂಬಿಕೆಯ ಕೊರತೆಯನ್ನು ನೋಡಿದ್ದರ ಕಾರಣದಿಂದ ಆತನು ಅತ್ತನೆಂದು ಕೆಲವರು ಸೂಚಿಸಿದರು. ಹೀಗಿದ್ದರೂ, ಯೇಸುವು ತನ್ನ ಸೇವೆಯಲ್ಲಿ ಬಹಳಷ್ಟು ಅವಿಶ್ವಾಸವನ್ನು ನೋಡಿದ್ದನು ಹಾಗೂ ನಿಶ್ಚಯವಾಗಿಯೂ ಅಳುವುದು ಆತನ ಸೂಚಕ ಉತ್ತರವಾಗಿದ್ದಿಲ್ಲ.

ಯೇಸುವಿನ ಮುಖದ ಮೇಲೆ ಕಣ್ಣೀರು ಹರಿಯುತ್ತಿದ್ದಂಥದ್ದು, ಮೌನವಾಗಿರುವುದು ಏನಾಗಿದೆಯೆಂಬುದನ್ನು ಪ್ರದರ್ಶಿಸುತ್ತದೆ. ಸಿ. ಎಸ್. ಲೂಯಿಸ್ ಅವರ ಕಥೆಯನ್ನು ಜ್ಞಾಪಿಸಿಕೊಂಡು, ಯೇಸುವು ನಮ್ಮ ನಮ್ಮ ಜಗತ್ತಿನೊಳಗೆ ಬರಲಿಕ್ಕಿದ್ದನು, ನಮ್ಮೊಂದಿಗೆ ಕುಳಿತು ಕೊಂಡನು ಮತ್ತು ಅತ್ತನು ಎಂದು ನೀವು ಹೇಳ ಬಹುದು!

## ಮುಕ್ತಾಯ

ಡೇಮಿಯನ್ ಡಿ ವ್ಯೂಸ್ಟರನು (1840-89) 1864ರಲ್ಲಿ ತನ್ನ ಸಹೋದರನು ಟೈಫಸ್ ಜ್ವರದಿಂದ ಅಸ್ವಸ್ಥನಾಗಿದ್ದರಿಂದ ಅವನ ಬದಲಾಗಿ ಹವಾಯಿಗೆ ಒಬ್ಬ ಮಿಶನರಿಯಾಗಿ ಹೋದನು. ನಡುಗಡ್ಡೆಯಲ್ಲಿ ಒಂಭತ್ತು ಕಠಿಣವಾದ ಮಿಶನ್ ಸೇವೆಯ ನಂತರ, ಡೇಮಿಯನ್‌ನು ಮೊಲೊಕಾಯಿ ನಡುಗಡ್ಡೆಗೆ ಹೋಗಲು ಸ್ವಯಂ ಪ್ರೇರಣೆಯಿಂದ ಒಪ್ಪಿಕೊಂಡನು. ಅದು ಕುಷ್ಠರೋಗಿಗಳು ಜೀವಿಸಲು ಒತ್ತಾಯದಿಂದ ಕಳುಹಿಸಲ್ಪಟ್ಟ ಸ್ಥಳವಾಗಿತ್ತು. ಅಲ್ಲಿ ಅವನು ನರ್ಸಿನಂತೆ, ಕಟ್ಟುವವನಂತೆ, ಮೇಸ್ತ್ರಿಯಂತೆ, ವೈದ್ಯನಂತೆ, ಕಾರ್ಮಿಕನಂತೆ, ಶವಪೆಟ್ಟಿಗೆ ಮಾಡುವವನಂತೆ, ಕುಣಿ ಅಗಿಯುವವನಂತೆ ಸೇವೆ ಮಾಡಿದನು. ಅವನು ಆ ನಡುಗಡ್ಡೆಯಲ್ಲಿ ಎರಡು ಅನಾಥಾಶ್ರಮಗಳನ್ನು ಕಟ್ಟಿದನು. ಪ್ರತಿ ಭಾನುವಾರ ಪ್ರಸಂಗಿಸಿದನು. ಯಾವಾಗಲೂ ತನ್ನ ಪ್ರಸಂಗವನ್ನು "ಕುಷ್ಠರೋಗಿಗಳೇ ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಎಂಬುದನ್ನು ತಿಳಿದುಕೊಳ್ಳಿರಿ" ಎಂಬ ಮಾತುಗಳಿಂದ ಪ್ರಾರಂಭಿಸುತ್ತಿದ್ದನು. ಆಗ ಒಂದು ದಿನ ಡೇಮಿಯನ್ನನು ತಾನೂ ಸಹ ಕುಷ್ಠದಿಂದ ಸೋಂಕಿಸಲ್ಪಟ್ಟಿದ್ದೇನೆ ಎಂಬುದನ್ನು ಕಂಡುಕೊಂಡನು. ಮುಂದಿನ ಭಾನುವಾರ ಅವನು ಸಭೆಯವರ ಮುಂದೆ ನಿಂತು ಕೊಂಡಾಗ, "ಕುಷ್ಠರೋಗಿಗಳಾದ ನಾವು, ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂಬುದನ್ನು ಬಲ್ಲೆವು" ಎಂದು ಪ್ರಾರಂಭಿಸಿದನು.

ಲಾಜರನ ಸಮಾಧಿಯ ಹೊರಗೆ ಇದ್ದ ಯೇಸುವಿನ ಚಿತ್ರವು ಮಾನವನಾಗಿರುವದರ ಸಂಪೂರ್ಣತೆಯ ಅನುಭವವನ್ನು ಯೇಸುವು ಅನುಭವಿಸಿದ್ದರ ಸಜೀವ ಜ್ಞಾಪಿಸುವಿಕೆಯಾಗಿದೆ. ಆತನು 50ಶತಮಾನದವನು ಮತ್ತು 50ಶತ ದೇವರು ಆಗಿರಲಿಲ್ಲ; ನೂರಕ್ಕೆ ನೂರರಷ್ಟು ಮಾನವನಾಗಿದ್ದನು. ಮತ್ತು ನೂರಕ್ಕೆ ನೂರರಷ್ಟು ದೇವರಾಗಿ ಉಳಿದು ಕೊಂಡಿದ್ದನು. ಯೇಸುವು ನಮ್ಮ ಜಗತ್ತನ್ನು ಪ್ರವೇಶಿಸುತ್ತಾನೆ. ನಮ್ಮ ನೋವನ್ನು ಅನುಭವಿಸುತ್ತಾನೆ. ಮತ್ತು *ನಮ್ಮ ಕಣ್ಣೀರುಗಳನ್ನು* ಸುರಿಸುತ್ತಾನೆ. ಇದೆಲ್ಲವೂ “ದೇವರು *ನಮ್ಮನ್ನು* ಪ್ರೀತಿಸುತ್ತಾನೆ ಎಂಬುದನ್ನು ಬಲ್ಲೆವು” ಎಂಬ ಸಂದೇಶವನ್ನು ಕೊಡುವದಕ್ಕಾಗಿತ್ತು.

---

ಟಿಪ್ಪಣಿಗಳು

[1]Quoted in Richard Foster, *Prayer* (San Francisco: Harper, 1992), 37. [2]ಅದೇ ಗ್ರೀಕ್ ಪದ, *embrimaomai* ಎಂಬುದು, “ನೊಂದುಕೊಂಡನು” ಎಂದು ವಚನಗಳು 33 ಮತ್ತು 38ರಲ್ಲಿ ಭಾಷಾಂತರಿಸಲ್ಪಟ್ಟಿದೆ.